ದಿ.18.08.2022 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು : ಶ್ರೀ ಕೆ.ಎನ್.ಎಸ್. ವಕೀಲರಿಂದ ಆರೋಪಿತನ ಪರವಾಗಿ** :

4. ಲೋಕಾಯುಕ್ತ ಪೋಲೀಸರು ಆರೋಪಿ ಕಛೇರಿಯಲ್ಲಿ ಟ್ರಾಪ್ ಮಾಡುವ ಸಂದರ್ಭದಲ್ಲಿ ನಾನು ಹಾಜರಿರಲಿಲ್ಲ. ನಾನು ಆರೋಪಿಯ ಕಛೇರಿಯಲ್ಲಿ ಕೆಲಸ ಮಾಡುತ್ತಿದ್ದೇನೆ. ಆ ದಿನ ಆರೋಪಿಯ ಕಛೇರಿಯಲ್ಲಿ ಏನು ಸಂಭಾಷಣೆ ನಡೆಯಿತು ಎಂದು ನನಗೆ ಗೊತ್ತಿಲ್ಲ. ಲೋಕಾಯುಕ್ತ ಪೋಲೀಸರು ನನಗೆ ಕೇಳಿಸಿದ್ದ ಧ್ವನಿ ಮುದ್ರಣ ಯಾರದೆಂದು ಗುರುತಿಸಲು ಆಗಿಲ್ಲ ಎಂದರೆ ಸರಿಯಲ್ಲ. ಆರೋಪಿ ಯಾರ ಬಳಿ ಮಾತನಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ.

5. ಈ ಪ್ರಕರಣದಲ್ಲಿ ಏನು ಆಗಿದೆ ಎಂದು ನನಗೆ ನಿಖರವಾಗಿ ಮಾಹಿತಿ ಇಲ್ಲ ಎಂದರೆ ಸರಿ. ಲೋಕಾಯುಕ್ತ ಪೋಲೀಸರು ಮಾಡಿಕೊಂಡಿದ್ದ ಹೇಳಿಕೆಯನ್ನು ನಾನು ಓದಿ ತಿಳಿದುಕೊಂಡಿದ್ದೇನೆ. ನಾನು ಕೊಟ್ಟ ಹೇಳಿಕೆ ಎಷ್ಟು ಪುಟಗಳು ಇತ್ತು ಮತ್ತು ಎಷ್ಟು ಪ್ಯಾರಾ ಇತ್ತು ಎಂದು ನನಗೆ ಗೊತ್ತಿಲ್ಲ. ನಾನು ಪೋಲೀಸರ ಮುಂದೆ ಯಾವುದೇ ಹೇಳಿಕೆಯನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಪೋಲೀಸರ ಹೇಳಿಕೆ ಮೇರೆಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮಹಜರ ಬರೆಯಲು ಯಾರು ಮಾಹಿತಿ ಕೊಟ್ಟಿದ್ದಾರೆಂದು ನನಗೆ ಗೊತ್ತಿಲ್ಲ. ಮಹಜರನಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ .

ಪ್ರಧಾನ ಜಿಲ್ಲಾ ಮತ್ತು ಸೆಷನ್ಸ ನ್ಯಾಯಾಧೀಶರು,
ದಾವಣಗೆರೆ.